ವೈದ್ಯರುಗಳಿರಬೇಕಿತ್ತು ಆದರೆ ನಾಲ್ಕು ಜನರು ಇದ್ದಾರೆ. ಶಹಾಬಾದ್‌ನಿಂದ ಒಬ್ಬರು ವೈದ್ಯರನ್ನು ಅಲ್ಲಿಗೆ ಎಕ್ಸ್‌ಟ್ರಾ ಆಗಿ ಡೆಪ್ಯೂಟ್ ಮಾಡಿದ್ದಾರೆ. ಅಂದರೆ ಒಂದು ಕಡೆ ವೈದ್ಯರ ಕೊರತೆ ಇದೆ, ಇನ್ನೊಂದು ಕಡೆ ಎಕ್ಸಸ್ ಇದ್ದಾರೆ. ಬೇರೆ ಬೇರೆ ಶಿಫಾರಸ್ಸನ್ನು ಮಾಡಿಸಿ ಬಂದಿರುತ್ತಾರೆ. ಅವರಿಗೆ ಕೆಲಸವೇ ಇರುವುದಿಲ್ಲ ಇದರಿಂದ ಆಡಳಿತ ಪೂರ್ಣವಾಗಿ ಹದಗೆಡುತ್ತಿದೆ. ರಾಜ್ಯದಲ್ಲಿರುವ ಇ.ಎಸ್.ಐ. ಆಸ್ಪತ್ರೆಗಳಲ್ಲಿ ಯಾವುದೇ ಬಿಗಿ ಇಲ್ಲದಿರುವ ಸ್ಥಿತಿ ನಿರ್ಮಾಣವಾಗುತ್ತಿದೆ. ಯಾರು ಎಲ್ಲಿ ಬೇಕೋ, ಹೇಗೆ ಬೇಕೋ ಹಾಗೆ ನಡೆದುಕೊಳ್ಳುತ್ತಿದ್ದಾರೆ. ಇವರ ಬಗ್ಗೆಯೂ ತಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎ.ಎಂ.ಹಿಂಡಸಗೇರಿ – ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೇನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಅಂಥ ಪರಿಸ್ಥಿತಿಯಾಗಿಲ್ಲ ಆದರೂ ಏನು ಹೆಚ್ಚುವರಿ ವೈದ್ಯರಿದ್ದಾರೆಂದು ಹೇಳಿದ್ದಾರೆ ಅದನ್ನು ನೋಡಿ ಅವರನ್ನು ಮಂಗಳೂರಿಗೆ ಶಿಫ್ಟ್ ಮಾಡಲು ನಾನು ಪ್ರಯತ್ನ ಮಾಡುತ್ತೇನೆ.

ಚಾಮರಾಜನಗರ ಜಿಲ್ಲೆಯಲ್ಲಿ ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಕೈಗೆತ್ತಿಕೊಳ್ಳಲಾದ ರಸ್ತೆ ಅಭಿವೃದ್ಧಿ ಕಾಮಗಾರಿಗಳು.

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ : 68(92)

ಸದಸ್ಯರ ಹೆಸರು : ಶ್ರೀ ಕೃಷ್ಣಮೂರ್ತಿ ಎ.ಆರ್.(ಸಂತೇಮರಳ್ಳಿ)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)

ಪ್ರಶ್ನೆ

ಅ) ಚಾಮರಾಜನಗರ ಜಿಲ್ಲೆಯಲ್ಲಿ ಕೇಂದ್ರ ರಸ್ತೆನಿಧಿ ಯೋಜನೆಯಡಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ? ಇದು ಯಾವ ಹಂತದಲ್ಲಿದೆ? ಪೂರ್ಣಗೊಳ್ಳುವುದು ಯಾವಾಗ? ಯಾವ ಯಾವ ಕಾಮಗಾರಿಗೆ ಎಷ್ಟು ಹಣ ಮಂಜೂರಾಗಿದೆ? ವಿವರ ನೀಡುವುದು?

ಆ) ಸಂತೇಮರಳ್ಳಿ ಕ್ಷೇತ್ರ ಸರಗೂರು-ಹೊಂಗನೂರು ರಸ್ತೆ ಅಭಿವೃದ್ಧಿಯನ್ನು ಯಾವ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿದೆ. ಈ ರಸ್ತೆ ಅಭಿವೃದ್ಧಿಗೆ ಪ್ರಸ್ತಾವನೆ ಸಲ್ಲಿಸಿರುವ ಅಥವಾ ಮಂಜೂರಾಗಿರುವ ಹಣವೆಷ್ಟು? ಈ ಕಾಮಗಾರಿ ಪೂರ್ಣಗೊಳ್ಳುವುದು ಯಾವಾಗ?

ಉತ್ತರ

ಅ) ಕೇಂದ್ರ ರಸ್ತೆನಿಧಿ ಅಡಿಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಈ ಕೆಳಕಂಡ ಎರಡು ಜಿಲ್ಲಾ ಮುಖ್ಯ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅನುಮೋದನೆ ಬಂದ ನಂತರ ಅಭಿವೃದ್ಧಿಗಾಗಿ ಕ್ರಮ ಕೈಗೊಳ್ಳಲಾಗುವುದು.

1) ಕೊಳ್ಳೇಗಾಲ ತಾಲ್ಲೂಕಿನ ಸತ್ಯಗಾಲ ಹ್ಯಾಂಡ್ ಪೋಸ್ಟ್-ಬರಚುಕ್ಕಿ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿಪಡಿಸುವ ಬಗ್ಗೆ ರೂ.20.80 ಲಕ್ಷಗಳು

2) ಸರಗೂರು-ಹೊಂಗನೂರು ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿಪಡಿಸುವ ಬಗ್ಗೆ ರೂ.61.00 ಲಕ್ಷಗಳು

ಆ) ಈ ಕಾಮಗಾರಿಯನ್ನು ಕೇಂದ್ರ ರಸ್ತೆನಿಧಿ ಯೋಜನೆಯಡಿಯಲ್ಲಿ ಕೈಗೊಳ್ಳುವ ಸಲುವಾಗಿ ರೂ.61.00 ಲಕ್ಷಗಳ ಮೊತ್ತಕ್ಕೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ. ಸದರಿ ಕಾಮಗಾರಿಗೆ ಕೇಂದ್ರ ಸಾರಿಗೆ ಸಚಿವಾಲಯದಿಂದ ಅನುಮೋದನೆ ದೊರೆತ ನಂತರ ಕೆಲಸ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎ.ಆರ್.ಕೃಷ್ಣಮೂರ್ತಿ:- ಮಾನ್ಯ ಅಧ್ಯಕ್ಷರೆ, ನಮ್ಮ ಚಾಮರಾಜ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವಂಥ ಸಿ.ಆರ್.ಎಫ್. ರಸ್ತೆಯ ವಿಚಾರದಲ್ಲಿ ನಾನು ಪ್ರಶ್ನೆಗಳನ್ನು ಕೇಳಿದ್ದೆ. ಇದರಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಸತ್ಯಗಾಲ ಹ್ಯಾಂಡ್ ಪೋಸ್ಟ್-ಬರಚುಕ್ಕಿ, ಜಿಲ್ಲಾ ಮುಖ್ಯ ರಸ್ತೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಮತ್ತು ಸರಗೂರು-ಹೊಂಗನೂರು ಜಿಲ್ಲಾ ಮುಖ್ಯ ರಸ್ತೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿರುವುದಾಗಿ ಉತ್ತರ ನೀಡಿರುತ್ತಾರೆ. ಇದರ ವೆಚ್ಚ ಕ್ರಮವಾಗಿ 20.80 ಲಕ್ಷ ರೂ. ಮತ್ತು 61 ಲಕ್ಷ ರೂ.ಗಳಾಗಿರುತ್ತದೆ. ನನ್ನ ಎರಡನೆಯ ಪ್ರಶ್ನೆಗೆ ಉತ್ತರ ನೀಡುತ್ತಾ ಈ ಕಾಮಗಾರಿಯನ್ನು ಕೇಂದ್ರ ರಸ್ತೆ ನಿಧಿ ಯೋಜನೆಯಡಿಯಲ್ಲಿ ಕೈಗೊಳ್ಳುವ ಸಲುವಾಗಿ 61 ಲಕ್ಷ ರೂ. ಮೊತ್ತಕ್ಕೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ. ಸದರಿ ಕಾಮಗಾರಿಗೆ ಕೇಂದ್ರ ಸಾರಿಗೆ ಸಚಿವಾಲಯದಿಂದ ಅನುಮೋದನೆ ದೊರೆತ ನಂತರ ಕೆಲಸ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿದ್ದಾರೆ. ಇದುವರೆಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಸಿ.ಆರ್.ಎಫ್. ರಸ್ತೆಗಳ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿದೆ, ಅದಕ್ಕೆ ಪೂರ್ಣ ಪ್ರಮಾಣದಲ್ಲಿ ಕೇಂದ್ರ ಸರ್ಕಾರದಿಂದ ಅಂಕಿತ ದೊರೆತಿಲ್ಲವೆಂಬುದನ್ನು ಇಲಾಖೆಯ ಮುಖಾಂತರ ತಿಳಿದುಕೊಂಡಿದ್ದೇನೆ, ಇದು

ನಿಜವೇ? ಮತ್ತು ಸರಗೂರು-ಹೊಂಗನೂರು ಜಿಲ್ಲಾ ಮುಖ್ಯ ರಸ್ತೆಯ ಬಗ್ಗೆ ತಾವೇನು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೀರಿ ಅದನ್ನು ಪಟ್ಟಿಯಿಂದ ಕೈಬಿಡಲಾಗಿದೆಯೆಂದು ಸಹ ವಿಚಾರ ತಿಳಿದುಕೊಂಡಿದ್ದೇನೆ. ಇದು ನಿಜವೇ?

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ನಾನು ಈ ತಿಂಗಳ 12ರಂದು ಇದಕ್ಕೆ ಸಂಬಂಧಪಟ್ಟ ಕೇಂದ್ರ ಸಚಿವರ ಜೊತೆ ಸಮಾಲೋಚನೆ ಮಾಡಿದ್ದೇನೆ. ಈ ಎರಡು ರಸ್ತೆಗಳು ಈ ಪಟ್ಟಿಯಲ್ಲಿ ಸೇರಿದೆ ಎಂಬುದನ್ನು ಸ್ಪಷ್ಟವಾಗಿ ಈ ಸದನಕ್ಕೆ ತಿಳಿಸುತ್ತಿದ್ದೇನೆ. ಇದಕ್ಕೆ ಒಂದೆರಡು ತಿಂಗಳಿನಲ್ಲಿ ಅನುಮೋದನೆ ಬರುತ್ತದೆ, ಬಂದ ತಕ್ಷಣ ಕೆಲಸ ಪ್ರಾರಂಭ ಮಾಡಲಾಗುತ್ತದೆ.

ಶ್ರೀ ಹೆಚ್.ಎಸ್.ಮಹದೇವ್ ಪ್ರಸಾದ್:- ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಜಿಲ್ಲೆಯ ಯಾವ್ಯಾವ ರಸ್ತೆಗಳು ಸಿ.ಆರ್.ಎಫ್.ನ ಅಡಿಯಲ್ಲಿ ಸೇರಿದೆ ಎಂಬ ಬಗ್ಗೆ ಅವರು ಹೇಳಿದ್ದಾರೆ. ಎರಡು ರಸ್ತೆಗಳು ಮಾತ್ರ ಇದುವರೆಗೆ ಸೇರಿರತಕ್ಕದ್ದು. ಚಾಮರಾಜನಗರ ಜಿಲ್ಲೆ ತಮಗೆ ಗೊತ್ತಿರುವಂತೆ ಗಡಿಪ್ರದೇಶದಲ್ಲಿರುವ ಮತ್ತು ಬಹಳ ಹಿಂದುಳಿದಿರುವ ಜಿಲ್ಲೆ. ಈ ಜಿಲ್ಲೆಯಲ್ಲಿ ಸಿ.ಆರ್.ಎಫ್. ಫಂಡ್‌ನಲ್ಲಿ ಕೇವಲ 80 ಲಕ್ಷ ರೂಪಾಯಿಗಳ ಕೆಲಸ ಮಾತ್ರ ಸೇರಿದೆ. ಮಾನ್ಯ ಸಚಿವರು ನಮ್ಮ ಜಿಲ್ಲೆಯ ಕಡೆ ಸ್ವಲ್ಪ ಗಮನಹರಿಸಿ ಇನ್ನೂ ಹೆಚ್ಚಿನ ರಸ್ತೆಗಳನ್ನು ಸೇರಿಸಬೇಕು. ಗುಂಡ್ಲುಪೇಟೆ, ಯಳಂದೂರು ಮುಂತಾದ ತಾಲ್ಲೂಕಿನ ಯಾವುದೇ ರಸ್ತೆಗಳು ಇದರಲ್ಲಿ ಸೇರಿಲ್ಲ. ಅದನ್ನು ಸೇರಿಸುವ ಕೆಲಸವನ್ನು ಮಾಡಬೇಕೆಂದು ಅವರಲ್ಲಿ ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ದಯಮಾಡಿ ಈ ಸಿ.ಆರ್.ಎಫ್.ನ್ನು ಎಲ್ಲಾ ಕ್ಷೇತ್ರಗಳಿಗೂ ಹಂಚಬೇಕು. ಕೇವಲ ಕೆಲವೇ ಕ್ಷೇತ್ರಕ್ಕೆ ಇದು ಸೀಮಿತವಾಗಬಾರದು. ವಿರೋಧ ಪಕ್ಷದ ಶಾಸಕರೇನಿದ್ದಾರೆ ಅವರ ಕ್ಷೇತ್ರದ ಬಗ್ಗೆಯೂ ಸ್ವಲ್ಪ ಕಾಳಜಿ ಮಾಡಬೇಕು. ನಾನು ಆ ಲಿಸ್ಟ್‌ನ್ನು ನೋಡಿದ್ದೇನೆ, ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ 14 ರಸ್ತೆಗಳಿಗೆ ಸ್ಯಾಂಕ್ಷನ್ ಆಗಿದೆ. ಈ ರೀತಿ ಪಕ್ಷಪಾತ ಮಾಡುವುದು ಬೇಡ. ಎಲ್ಲರನ್ನೂ ಸಮಾನರಾಗಿ ಕಾಣುವಂಥಾದ್ದು ಆಗಬೇಕು. ಎಲ್ಲಾ ಶಾಸಕರ ಕ್ಷೇತ್ರದ ಪ್ರಮುಖ ರಸ್ತೆಗಳೇನಿದೆ ಅದರ ಪಟ್ಟಿ ಮಾಡಿ ಸಿ.ಆರ್.ಎಫ್.ಗೆ ದಯಮಾಡಿ ಕಳಿಸಿಕೊಡಿ.

ಶ್ರೀ ಕೆ.ಶ್ರೀನಿವಾಸಗೌಡ:- ಮಾನ್ಯ ಧರ್ಮಸಿಂಗ್‌ರವರು ವಿರೋಧ ಪಕ್ಷದ ಸದಸ್ಯರ ಕ್ಷೇತ್ರದ ರಸ್ತೆಗಳನ್ನೇನೂ ಬಿಟ್ಟಿಲ್ಲವೆಂಬುದು ನನ್ನ ಅಭಿಪ್ರಾಯ. ನೇರವಾಗಿ ಹೇಳಬೇಕೆಂದರೆ, ಗುಣಕ್ಕೆ ಮತ್ಸರವಿರಬಾರದು. ಎಲ್ಲೋ ಒಂದು ಕಡೆ ಹಾಗಾಗಿರಬಹುದು. ಆದರೆ ಅವರು ಮಾಡಿರುವ ಕೆಲಸದ ಬಗ್ಗೆ ಹೇಳಬೇಕಾಗುತ್ತದೆ.

ತಾವು ಬ್ಲೇಮ್ ಮಾಡುವುದಿದ್ದರೆ ಬೇರೆ ಬೇಕಾದಷ್ಟು ವಿಚಾರದಲ್ಲಿ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅಧ್ಯಕ್ಷರೇ, ನಮ್ಮ ನೋವನ್ನು ನಾವು ಯಾರಿಗೆ ಹೇಳಿಕೊಳ್ಳಬೇಕು? ಇವತ್ತು ಲೋಕೋಪಯೋಗಿ ರಸ್ತೆಗಳು ಹಾಳಾಗಿ ಹೋಗಿವೆ, ಹೊಂಡಗಳು ಬಿದ್ದು ಮನುಷ್ಯರು ಓಡಾಡುವ ಸ್ಥಿತಿಯಲ್ಲಿ ಇಲ್ಲ. ಈ ಸಿ.ಆರ್.ಎಫ್. ಫಂಡ್‌ನಲ್ಲೂ ಸಹ, ಎಲ್ಲಾ ಕ್ಷೇತ್ರಗಳಿಗೂ ಸರಿಯಾಗಿ ವಿಂಗಡಣೆ ಮಾಡಿಲ್ಲ. ಅದು ಹೋಗಲಿ, ಎಲ್ಲಿ ನಿಜವಾಗಿಯೂ ರಸ್ತೆಗಳು ಹಾಳಾಗಿ ಹೋಗಿವೆ, ಅವುಗಳ ಬಗ್ಗೆ ಒಂದು ಸರಿಯಾದ ಮತ್ತು ಸಮಗ್ರವಾದ ಮ್ಯಾಪ್ ಮಾಡಲಿ. ಯಾವ ಯಾವ ರಸ್ತೆಗಳನ್ನು ಯಾವ ಯಾವ ಹಣದಲ್ಲಿ ಅಭಿವೃದ್ಧಿಪಡಿಸಬೇಕೆಂಬ ಬಗ್ಗೆ ಸಮಗ್ರವಾದ ಯೋಚನೆಯನ್ನಾದರೂ ಮಾಡಲಿ. ಆದರೆ, ಇದನ್ನೇನೂ ಮಾಡುವುದಿಲ್ಲ. ಯಾರು ಯಾರಿಗೆ ಬೇಕೋ ಅವರಿಗೆ ಅನುಕೂಲ ಮಾಡುತ್ತಿದ್ದಾರೆ. ಅವರು ರಾಜಕೀಯ ಉಪಯೋಗಕ್ಕಾಗಿ ರಸ್ತೆಗಳನ್ನು ರಿಪೇರಿ ಮಾಡಿದರೆ ಬಹಳ ತೊಂದರೆಯಾಗುತ್ತದೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್:- ಮಾನ್ಯ ಸಭಾಧ್ಯಕ್ಷರೇ, 2001-02ನೇ ಸಾಲಿನಲ್ಲಿ 65 ಕೋಟಿ 8 ಲಕ್ಷ ರೂಪಾಯಿಗಳು ಮಂಜೂರಾಗಿದೆ. ಸಿ.ಆರ್.ಎಫ್. ಫಂಡ್‌ನಲ್ಲಿ 86 ಕೆಲಸಗಳನ್ನು ಅಪ್ರೂವ್ ಮಾಡಿದ್ದಾರೆ. ನಮ್ಮ ಕ್ಷೇತ್ರಕ್ಕೆ ಇಲ್ಲಿಯವರೆಗೆ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ಈ 65 ಕೋಟಿ ರೂಪಾಯಿಗಳಲ್ಲಿ ಮಂಡ್ಯ ಜಿಲ್ಲೆಗೆ 18 ಕೋಟಿ ರೂ, ಗುಲ್ಬರ್ಗಾ ಜಿಲ್ಲೆಗ ಆರು ಕೋಟಿ ರೂ, ನಮ್ಮ ಜಿಲ್ಲೆಗೆ ಒಂದು ಕೋಟಿ ರೂಪಾಯಿ. ಆದರೆ, ನನ್ನ ಕ್ಷೇತ್ರಕ್ಕೆ ಒಂದು ರೂಪಾಯಿ ಕೂಡ ಇಲ್ಲ. ಈ ತಾರತಮ್ಯವನ್ನು ಏಕೆ ಮಾಡುತ್ತಿದ್ದೀರಿ? ನಮ್ಮಲ್ಲಿ ಅದರ ಅಗತ್ಯ ಇಲ್ಲವೇ ಎಂಬುದು ಪ್ರಶ್ನೆ.

ಶ್ರೀ ಆರ್.ಧರ್ಮಸಿಂಗ್:- ಚಾಮರಾಜನಗರದಲ್ಲಿ ತೆಗೆದುಕೊಳ್ಳತಕ್ಕಂಥ ಎರಡು ರಸ್ತೆಗಳ ಬಗ್ಗೆ ಮಾನ್ಯ ಕೃಷ್ಣಮೂರ್ತಿಯವರು ಉಲ್ಲೇಖ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರು ಮತ್ತು ಇತರೆ ಸದಸ್ಯರು ಹೇಳುವುದನ್ನೂ ನಾನು ಒಪ್ಪುತ್ತೇನೆ. ಪ್ರತಿ ವರ್ಷ ಇದಕ್ಕೆ ಐವತ್ತೇಳೂವರೆ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಮೊಟ್ಟಮೊದಲನೆಯದಾಗಿ ಇವತ್ತು 113 ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದಾರೆ. ಮೊನ್ನೆ 12ನೇ ತಾರೀಖಿನ ದಿವಸ ಪ್ರಿನ್ಸಿಪಲ್ ಸೆಕ್ರಟರಿ ಮತ್ತು ಸೆಕ್ರಟರಿ ಜೊತೆಯಲ್ಲಿ ಮಾನ್ಯ ಕಂಡೂರ್‌ರವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದೇನೆ. ಆ ಸಭೆಯಲ್ಲಿ ಶ್ರೀ ಅಶೋಕ್ ಎಸ್.ಎಲ್.ಜೋಶಿಯವರೂ ಕೂಡ ಇದ್ದರು. ಎಲ್ಲಾ ಕ್ಷೇತ್ರಗಳಿಗೂ ಸರಿಸಮಾನವಾಗಿ ಹಂಚಬೇಕೆಂಬುದು ಸರ್ಕಾರದ ಧೋರಣೆಯಾಗಿದೆ. ಮುಂದೆ ಐವತ್ತೇಳೂವರೆ ಕೋಟಿ ರೂಪಾಯಿಗಳನ್ನು ಹಂಚುವಾಗ ನಮ್ಮ ಜೊತೆಯಲ್ಲೇ ಮ್ಯಾಪ್ ತೆಗೆದುಕೊಂಡು ಸರಿಯಾಗಿ, ಸಮಾನವಾಗಿ ಹಂಚತಕ್ಕದ್ದು ಇದೆ. ಇವತ್ತು ಎಲ್ಲೆಲ್ಲಿ ರಸ್ತೆಗಳು ಸೇರಿವೆ, ಯಾವ ಯಾವ ಶಾಸನ ಸಭಾ ಸದಸ್ಯರ

ಕ್ಷೇತ್ರಗಳ ರಸ್ತೆಗಳು ಸೇರಿಲ್ಲ ಅದನ್ನೂ ಕೂಡ ಒದಗಿಸತಕ್ಕ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಮಂತ್ರಿಗಳ ಮಾತನ್ನು ಕಳೆದ ಎರಡೂವರೆ ವರ್ಷಗಳಿಂದ ಕೇಳಿ ಸಾಕಾಗಿ ಹೋಗಿದೆ. ಒಂದು ರಸ್ತೆ ಕೂಡ ಸರಿಯಿಲ್ಲ, ಓಡಾಡುವ ಸ್ಥಿತಿಯಲ್ಲಿ ರಸ್ತೆಗಳು ಇಲ್ಲ.

ಅಧ್ಯಕ್ಷರು:- ಶಾಸಕರ ಜೊತೆ ಸಮಾಲೋಚನೆ ಮಾಡಿ, ಸರಿಸಮಾನವಾಗಿಯೇ ಹಂಚಿಕೆ ಮಾಡತಕ್ಕ ವ್ಯವಸ್ಥೆ ಮಾಡುತ್ತೇವೆಂದು ಹೇಳುತ್ತಿದ್ದಾರಲ್ಲಾ ದಯವಿಟ್ಟು ಮಾನ್ಯ ಮಂತ್ರಿಗಳ ಮಾತಿನ ಮೇಲೆ ನಂಬಿಕೆ ಇಡಿ.

ಶ್ರೀ ಸಿ.ಭೈರೇಗೌಡ:- ಈಗಾಗಲೇ ಕೇಂದ್ರಸರ್ಕಾರಕ್ಕೆ ಕಳುಹಿಸಿರತಕ್ಕ ಒಟ್ಟು ಮೊತ್ತದ ಕೆಲಸಗಳೆಷ್ಟು? ಅದರಲ್ಲಿ ಮಂಜೂರಾಗಿರತಕ್ಕ ಕೆಲಸಗಳು ಎಷ್ಟು? ಉಳಿದಿರತಕ್ಕ ಕೆಲಸಗಳನ್ನು ಯಾವಾಗ ಮಂಜೂರು ಮಾಡಿಸಿಕೊಳ್ಳುತ್ತೀರಿ? ದಯವಿಟ್ಟು ತಿಳಿಸಿ.

ಶ್ರೀ ಆರ್.ಧರ್ಮಸಿಂಗ್:- ಒಟ್ಟಾರೆ ಈಗಾಗಲೇ 238 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿರುತ್ತೇವೆ. ಅದರಲ್ಲಿ 113 ಕೋಟಿ 12 ಲಕ್ಷ ರೂಪಾಯಿಗಳು ಸ್ಯಾಂಕ್ಷನ್ ಆಗಿ ಬಂದಿದೆ. ಇವತ್ತು ಅನೇಕ ಶಾಸನ ಸಭಾ ಸದಸ್ಯರ ಕ್ಷೇತ್ರಗಳಲ್ಲಿ ಈ ರಸ್ತೆ ಕೆಲಸಗಳು ಬಂದಿಲ್ಲ ಅದನ್ನು ನಾನು ಒಪ್ಪುತ್ತೇನೆ. ಇದು ಇವತ್ತೇ ನಿಲ್ಲತಕ್ಕಂಥಾದ್ದು ಅಲ್ಲ ಪ್ರತಿ ವರ್ಷವೂ ಪ್ರಸ್ತಾವನೆಯನ್ನು ಕಳುಹಿಸುತ್ತಿರುತ್ತೇವೆ. ಪೆಟ್ರೋಲ್ ಮತ್ತು ಡೀಸೆಲ್‌ನಿಂದ ಸೆಸ್ ಕಲೆಕ್ಟ್ ಮಾಡಿ, ಐವತ್ತೇಳೂವರೆ ಕೋಟಿ ರೂಪಾಯಿಗಳು ಏನು ರಾಜ್ಯ ಸರ್ಕಾರಕ್ಕೆ ಬರುತ್ತಾ ಇದೆ, ಅದನ್ನು ಎಲ್ಲಾ ಮತ ಕ್ಷೇತ್ರಗಳಲ್ಲಿಯೂ ಹಂಚತಕ್ಕ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಎಲ್ಲೆಲ್ಲಿ ಬಿಟ್ಟು ಹೋಗಿದೆ, ಅದರ ಬಗ್ಗೆಯೂ ಪ್ರಪೋಸಲ್ ಕಳುಹಿಸಿಕೊಟ್ಟಿದ್ದೇವೆ. 12ನೇ ತಾರೀಖಿನ ದಿವಸ ಶ್ರೀ ಕಂಡೋರಿಯವರ ಜೊತೆಯಲ್ಲಿ ಮಾತುಕತೆ ನಡೆಸಿದ್ದೇವೆ. ನೇರವಾಗಿ ಪಾರ್ಲಿಮೆಂಟ್ ಸದಸ್ಯರಾಗಲೀ ಅಥವಾ ಬೇರೆ ಸದಸ್ಯರಾಗಲೀ ಲೆಟರ್ ಬರೆದರೆ, ಅದರ ಮೇಲೆಯೂ ಸ್ಯಾಂಕ್ಷನ್ ಆಗಿರುತ್ತದೆ. ಇವತ್ತು ಲೋಕೋಪಯೋಗಿ ಇಲಾಖೆಯಲ್ಲಿ ಇರತಕ್ಕ ಪ್ರತಿ ಕ್ಷೇತ್ರದಲ್ಲಿ ಎಲ್ಲಿ ಹದಗೆಟ್ಟ ರಸ್ತೆಗಳಿವೆ, ಅವುಗಳನ್ನು ತೆಗೆದುಕೊಳ್ಳುವುದು ನಮಗೆ ಗೊತ್ತು. ಎಲ್ಲಿ ನಬಾರ್ಡ್‌ನಿಂದ ಕೆಲಸ ತೆಗೆದುಕೊಂಡಿದ್ದೇವೆ, ಎಲ್ಲಿ ಸಿ.ಎಂ.ಪ್ರೋಗ್ರಾಂನಿಂದ ಕೆಲಸ ತೆಗೆದುಕೊಂಡಿದ್ದೇವೆ. ರಾಜ್ಯ ಹೆದ್ದಾರಿ ನಿರ್ವಹಣೆ ಕೆಲಸ ತೆಗೆದುಕೊಂಡಿದ್ದೇವೆ. ಇವೆಲ್ಲವನ್ನೂ ಬಿಟ್ಟು ವಿಶೇಷವಾಗಿ ಆದ್ಯತೆ ಕೊಡತಕ್ಕ ಕ್ಷೇತ್ರಗಳು ಕರ್ನಾಟಕ ರಾಜ್ಯದಲ್ಲಿವೆ. ಮುಂದೆ ಐವತ್ತೇಳೂವರೆ ಕೋಟಿ ರೂಪಾಯಿಗಳನ್ನು ಕೊಡತಕ್ಕ ಸಂದರ್ಭದಲ್ಲಿ ನಾವೂ ನೀವೂ ಕೂಡಿ ಸರಿಸಮಾನವಾಗಿ ಹಂಚತಕ್ಕ ಕೆಲಸ

ಮಾಡಬೇಕೆಂದು ಹೇಳಿದಾಗ ಒಪ್ಪಿಕೊಂಡಿದ್ದಾರೆ. ಅದನ್ನು ಮಾಡಿಕೊಡತಕ್ಕ ಆಶ್ವಾಸನೆಯನ್ನು ನಾನು ತಮಗೆ ಕೊಡುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ:- ನಮ್ಮ ಜಿಲ್ಲೆಗೆ, ನೀವು ಇಲಾಖೆಯ ವೀಕ್ಷಣೆಗಾಗಿ ಬಂದಾಗ ನಿಮ್ಮ ಇಲಾಖೆಯ ಅಧಿಕಾರಿಗಳು, ಪಿ.ಡಬ್ಲ್ಯು.ಡಿ ಕಾರ್ಯದರ್ಶಿಗಳು, ಚೀಫ್ ಇಂಜಿನಿಯರ್, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮತ್ತು ನಮ್ಮ ಕೇಂದ್ರ ಸಚಿವರು ಇದ್ದಾಗ, ಒಂದೆರಡು ಮಾರ್ಗಗಳನ್ನು ಸೇರಿಸಬೇಕೆಂದು ಹೇಳಿದಾಗ, ತಕ್ಷಣ ರೆಕಮೆಂಡ್ ಮಾಡಲಾಗುವುದೆಂಬ ಮಾತನ್ನು ಹೇಳಿದಿರಿ. ಉಪ್ಪಿನಂಗಡಿ, ಸುಬ್ರಹ್ಮಣ್ಯ ರಸ್ತೆಗಳನ್ನು ಸೇರಿಸಬೇಕೆಂದು ಹೇಳಿದ್ದು ಇನ್ನೂ ಕೂಡ ಇವುಗಳ ಬಗ್ಗೆ ಯಾವುದೇ ಕಾರ್ಯ ಆಗಲಿಲ್ಲ. ತಾವು ಏನು ರೆಕಮೆಂಡ್ ಮಾಡಿದ್ದೀರಿ, ಯಾವುದು ರೆಕಮೆಂಡ್ ಆಗಿಲ್ಲವೆಂಬುದೇ ನಮಗೆ ಗೊತ್ತಾಗುತ್ತಾ ಇಲ್ಲ.

ಶ್ರೀ ಬಿ.ಆರ್.ಯಾವಗಲ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ಬಹಳ ದೊಡ್ಡ ಪ್ರಮಾಣದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. ಆದರೆ, ಮುಂದೆ ಏನಾಯಿತು ಎಂಬುದು ಗೊತ್ತಿಲ್ಲ. ಈ ಕೆಲಸವಾರು ಮಂಜೂರಾತಿ ಪಡೆಯುವ ಅಧಿಕಾರ ಕೇಂದ್ರಸರ್ಕಾರದ ಕೈಯಲ್ಲಿದೆಯೋ ಅಥವಾ ರಾಜ್ಯಸರ್ಕಾರದ ಕೈಯಲ್ಲಿದೆಯೋ? ನಾವು ತಿಳಿದ ಹಾಗೆ ಕೆಲವು ಕೆಲಸಗಳನ್ನು ಕೇಂದ್ರ ಸರ್ಕಾರದಿಂದ ನೇರವಾಗಿ ಮಾನ್ಯತೆ ಮಾಡಿ, ಮಂಜೂರಾತಿ ಮಾಡಬೇಕೆಂಬುದನ್ನು ಕೇಳಿದ್ದೇವೆ. ಯಾವುದು ಸರಿಯಾದುದು ಎಂಬುದನ್ನು ದಯವಿಟ್ಟು ಅವರು ಹೇಳಲಿ.

ಶ್ರೀ ಎ.ಆರ್.ಕೃಷ್ಣಮೂರ್ತಿ:- ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆ ಹಾಕಿರತಕ್ಕ ಮೂಲ ಉದ್ದೇಶವೇನೆಂದರೆ, ಮಾನ್ಯ ಸಚಿವರು ಹೇಳಿದ ಹಾಗೆ ಇವತ್ತು ನಬಾರ್ಡ್‌ನಲ್ಲಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ವ್ಯಾಪ್ತಿಯಲ್ಲಿ ಮೂರು ಬಾರಿ ಸರ್ಕಾರದಿಂದ ಪ್ರಸ್ತಾವನೆ ಹೋಯಿತು. ಆದರೆ, ಈ ಪ್ರಸ್ತಾವನೆ ಮೂರು ಬಾರಿ ನಬಾರ್ಡ್‌ನಲ್ಲಿ ರಿಜೆಕ್ಟ್ ಆಗಿ, ಆ ರಸ್ತೆಗಳು ಪೂರ್ಣ ಪ್ರಮಾಣದಲ್ಲಿ ಚುರಸ್ತಿಯಾಗಲು ಸಾಧ್ಯವೇ ಆಗಿಲ್ಲ. ಹಾಗಾಗಿ, ಸಿ.ಆರ್.ಎಫ್.ನಲ್ಲಾದರೂ ಇವುಗಳಿಗೆ ಅವಕಾಶ ಮಾಡಿಕೊಡಿ ಎಂಬುದು ನನ್ನ ಮೂಲ ಪ್ರಶ್ನೆಯಾಗಿತ್ತು. ದಯವಿಟ್ಟು ಮಾನ್ಯ ಮಂತ್ರಿಗಳು ಈ ಎರಡು ರಸ್ತೆಗಳಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಧರ್ಮಸಿಂಗ್:- ನಾವು ನಬಾರ್ಡ್‌ನಿಂದಲೇ ಒದಗಿಸಿಕೊಡತಕ್ಕ ಪ್ರಯತ್ನ ಮಾಡುತ್ತೇವೆ. ಮಾನ್ಯ ಯಾವಗಲ್‌ರವರು ಕೇಳಿದ ಪ್ರಶ್ನೆಗೆ, ಪ್ರಪೋಸಲ್ ಕಳುಹಿಸತಕ್ಕಂಥಾದ್ದು ರಾಜ್ಯಸರ್ಕಾರದ ಹೊಣೆ. ಇದಕ್ಕೆ ಅಂತಿಮವಾಗಿ ಮನ್ನಣೆ ಕೊಡತಕ್ಕಂಥಾದ್ದು ಕೇಂದ್ರ ಸರ್ಕಾರ. ಇದು ಕೇಂದ್ರ ಸರ್ಕಾರದಿಂದ ಬರತಕ್ಕ ಸೆಂಟ್ರಲ್

ರೋಡ್ ಫಂಡ್ ಆಗಿರುವುದರಿಂದ, ಇವತ್ತು ಕೇಂದ್ರ ಸರ್ಕಾರದವರ ಮೇಲೆ ಹೊಣೆ ಇದೆ. ಅವರು ಮನ್ನಣೆ ಕೊಡುತ್ತಾರೆ. ಆದರೆ ಶ್ರೀ ಕಂಡೂರಿಯವರು ನಮ್ಮ ರಾಜ್ಯಸರ್ಕಾರದ ಜೊತೆ ಸಮಾಲೋಚನೆ ಮಾಡಿ, ಕೊಡುತ್ತೇವೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರ ಕೂಡ ಹಣ ಮಂಜೂರಾತಿ ಮಾಡಿಕೊಡುವುದರಲ್ಲಿ ಯಾವುದೇ ತಾರತಮ್ಯ ಮಾಡಿಲ್ಲ. ಅವರ ಜೊತೆಯಲ್ಲಿ ಮಾತನಾಡಿರುವುದರಿಂದ, ಇವತ್ತು ಕೇಂದ್ರ ಸರ್ಕಾರದಿಂದ ಕೂಡ ಸಾಕಷ್ಟು ಹಣ ರಾಜ್ಯಸರ್ಕಾರಕ್ಕೆ ಬರುತ್ತಾ ಇದೆ. ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳತಕ್ಕಂಥಾದ್ದು ಕೇಂದ್ರ ಸರ್ಕಾರಕ್ಕೆ ಬಿಟ್ಟಿದ್ದು.

(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಆರ್.ಧರ್ಮಸಿಂಗ್(ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ:25-1-02ರಂದು ಸದನದಲ್ಲಿ ಉತ್ತರಿಸಬೇಕಾದ 15 ಪ್ರಶ್ನೆಗಳ ಪೈಕಿ 2, ಹಾಗೂ 28-1-02ರಂದು ಲಿಖಿತ ಮೂಲಕ ಉತ್ತರಿಸುವ ಒಟ್ಟು 230ರ ಪೈಕಿ 172 ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- X ಮಂಡಿಸಲಾಯಿತು. X

X ದಿನಾಂಕ 25-1-2002ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರ X

X - ಅನುಬಂಧ 1 ಮತ್ತು 2